ಹೋಗಿ ಬರುತ್ತಿದ್ದೆವು. ಮನುಷ್ಯತ್ವ ಎಲ್ಲ ತಪ್ಪುಗಳನ್ನು ಮೀರಿದ್ದು ಎಂದು ನಂಬಿಕೊಂಡವರಲ್ಲವೆ ನಾವು. ನಾವೆಲ್ಲಾ ಅಸಹ್ಯ ಪಟ್ಟುಕೊಳ್ಳುತ್ತಿದ್ದ ದೊಡ್ಡಪ್ಪ ಈಗ ಕೇವಲ ರೋಗಿ ಅಷ್ಟೇ. ಹಳೆಯ ಕರ್ಮಕಾಂಡವನ್ನೆಲ್ಲಾ ಮರೆತು ದೊಡ್ಡಪ್ಪನನ್ನು ಆಸ್ಪತ್ರೆಯಲ್ಲಿ, ಮನೆಯಲ್ಲಿ ಕೆಲ ತಿಂಗಳು ನೋಡಿಕೊಂಡೆವು, ದೊಡ್ಡಮ್ಮನನ್ನು ಹಾಗೇ ನೋಡಿಕೊಂಡಿದ್ದೆವು. ದೊಡ್ಡಮ್ಮನೆಂದು ಒಪ್ಪಿಕೊಳ್ಳಲಾರದ ದೊಡ್ಡಪ್ಪನ ಹೊಸ ಹೆಂಡತಿ ಒಳ್ಳೆಯವಳೇ. ಹೋದಾಗಲೆಲ್ಲಾ ಪ್ರೀತಿಯಿಂದ ಮನೆಗೆ ಕರೆಯುತ್ತಾಳೆ. ಬೇಡವೆಂದರೂ ಅರಿಸಿನ ಕುಂಕುಮ ಜೊತೆಗೆ ಸೀರೆಯನ್ನೂ ಕೊಡುತ್ತಾಳೆ. ಹೊಲ, ಮನೆ, ಒಡವೆ, ಆಸ್ತಿ ಕಳೆದು ಹಾಕಿಲ್ಲವೆಂದು ಮಾತಿನಲ್ಲಿಯೇ ಮನವರಿಕೆ ಮಾಡಿಕೊಡುತ್ತಾಳೆ. ಕೇಳಿ ಸಮಾಧಾನವಾದರೂ, ಆ ಮನೆಯಲ್ಲಿ ಪಾರಿಯ ಜೊತೆ ಆಟವಾಡಿದ ಕ್ಷಣಗಳೆಲ್ಲ ಕಂಬಗಳ ಮರೆಯಲ್ಲಿ ಇಣುಕಿ ಅಣಕಿಸುತ್ತಿವೆ ಈಗಲೂ.

ಪಕ್ಕದಲ್ಲೇ ಕೂತು ತೂಕಡಿಸುತ್ತಿದ್ದ ಪಾರಿಯನ್ನು ನೋಡಿ ಕಸಿವಿಸಿಯಾಯ್ತು, ಅದೇನೋ ಧೈರ್ಯಾನೋ ಬಂತು... ಕೇಳಿಯೇ ಬಿಟ್ಟೆ... 'ಅಲ್ಲ ಪಾರಿ ಎರಡು ಎಕರೆ ಜಮೀನು ಕೊಟ್ಟಿದ್ರಲ್ಲ ನಿನಗೆ ಎನ್ಮಾಡ್ದೆ?' ತೂಕಡಿಸುತ್ತಿದ್ದ ಪಾರಿ, 'ಆ...' ಎಂದು ಬುಸುಗುಟ್ಟತೊಡಗಿದಳು... 'ನಿಮ್ಮ ದೊಡ್ಡಪ್ಪ, ದೊಡ್ಡಮ್ಮ ನಂಬಿಸಿ ಕತ್ತು ಕುಯ್ದರು... ನನ್ನ ತಮ್ಮ, ಅವನ ಹೆಂಡತಿ ಎರಡು ಎಕರೆ ಜಮೀನು ಹೊಡ್ಕೊಂಡು ಆಚೆಗೆ ಅಟ್ಟಿದರು. ಏನ್ಮಾಡಬೇಕಿತ್ತು ನಾನು... ಎಲ್ಲಿಗೆ ಹೋಗಬೇಕಿತ್ತು? ಅದಕ್ಕೆ ಹುಚ್ಚಿ ಹಂಗೆ ಅಲೀತಿದಿನಿ. ಕರೆದು ತಿಂಡಿಕೊಟ್ಟು, ಸ್ನಾನ ಮಾಡಿಸಿ, ಸೀರೆ ಉಡಿಸಿ ಎಲ್ಲಾ ವಿಚಾರಿಸ್ತಿದೀಯಲ್ಲಾ... ನಿಮ್ಮನೆಗೆ ನನ್ನ ಇಟ್ಕಂತೀಯಾ? ಸಾಕ್ತೀಯಾ ನನ್ನ ಸಾಯ ತನಕ?' ಅವಳ ಆವೇಶದ ಅಬ್ಬರ ನೋಡಿ ದಿಗ್ಭ್ರಾಂತಿಯಾಯಿತು. ಪಾರಿ ಈ ಪರಿ ಪ್ರಶ್ನೆ ಮಾಡ್ತಾಳೆ ಅಂತ ನಿರೀಕ್ಷೆ ಮಾಡಿರಲಿಲ್ಲ ನಾನು, ಸಾವರಿಸಿಕೊಂಡು... 'ಅಲ್ಲ ಪಾರಿ... ಅದು ಹಾಗಲ್ಲ ನೋಡಿಲ್ಲಿ...' ನಾಲಿಗೆ ತಡವರಿಸತೊಡಗಿತು... 'ನನ್ನ ಮಾತು ಕೇಳು' ಪಾರಿ ಭುಜದ ಮೇಲೆ ಕೈಯಿಟ್ಟು ಸಮಾಧಾನ ಮಾಡಲೆತ್ನಿಸಿದೆ. ಕೈಕೊಡವಿ ಎದ್ದೇಬಿಟ್ಟಳು. ಕಷ್ಟಪಟ್ಟು ತಡೆದು ಕೂರಿಸಿದೆ. ಕೊಂಚ ಆಲೋಚಿಸಿ, ಪರಿಚಯವಿದ್ದ ಮಹಿಳಾ ಕೇಂದ್ರವೊಂದಕ್ಕೆ ಫೋನು ಮಾಡಿ ವಿವರಿಸಿದೆ. ಅಂದು ಸಂಜೆಯೇ ಡಾಕ್ಟರ್ ಬಳಿ ಕರೆದೊಯ್ದು ಚಿಕಿತ್ಸೆ ಮಾಡಿಸಿದೆ. ವಿಚಾರಿಸಿದ ನಂತರ 'ಗಂಭೀರ ಸಮಸ್ಯೆ ಏನೂ ಇಲ್ಲ... ಮನೋವಿಕಾರವಷ್ಟೆ ಬೇಗನೆ ವಾಸಿಯಾಗುತ್ತದೆ' ಎಂದಾಗ ನೆಮ್ಮದಿಯಾಯಿತು. ಎರಡು ದಿನ ನಮ್ಮ ಮನೆಯಲ್ಲೇ ಇಟ್ಟುಕೊಂಡು ಮೂರನೆಯ ದಿವಸ ಮಹಿಳಾ ಕೇಂದ್ರಕ್ಕೆ ಹೋಗಿ ಪಾರಿಯನ್ನು ಬಿಟ್ಟು, ಹೊಸದಾಗಿ ಕೊಡಿಸಿದ ಸೀರೆಗಳ ಬ್ಯಾಗನ್ನು, ಸ್ವಲ್ಪ ದುಡ್ಡನ್ನೂ ಕೊಟ್ಟು 'ಆಗಾಗ ಬಂದು ನೋಡಿಕೊಂಡು ಹೋಗುತ್ತೇನೆ, ಗಾಬರಿ ಆಗಬೇಡ ಪಾರಿ' ಅಂದೆ. ಧೈರ್ಯ ಮಾಡಿ ಅವಳ ಮುಖವನ್ನೊಮ್ಮೆ ನೋಡಿದೆ. ಕಣ್ಣುಗಳಲ್ಲಿ ನಿರ್ಲಿಪ್ತ ಭಾವವಿತ್ತು, ನನ್ನ ಮಾತನ್ನು ಅವಳು ನಂಬಲಿಲ್ಲವೆಂದು ಅರಿವಾಯಿತು. ಅಸಹಾಯಕಳಂತೆ ಕಾರಲ್ಲಿ ಕೂತು ಕೈ ಬೀಸಿದೆ. ನಿರ್ಲಿಪ್ತ ಭಾವ ದೂರವಾಗಿ, ಸಿಟ್ಟಿನಲ್ಲಿ ದುರದುರನೆ ನನ್ನನ್ನೇ ನೋಡುತ್ತಿದ್ದಳು.

ಬಟ್ಟೆಗಳ ಬ್ಯಾಗನ್ನು ಕೇಂದ್ರದ ಸಿಬ್ಬಂದಿ ಕೈಗೆ ಕೊಟ್ಟು ಎರಡು ಹೆಜ್ಜೆ ಕಾರಿನತ್ತ ಬಂದಳು. ಆದರೆ ಕಾರು ಆಗಲೇ ಹೊರಟು ಬಿಟ್ಟಿತು. ಚಡಪಡಿಕೆಯಾಯಿತು ನನಗೆ, ಮಹಿಳಾ ಕೇಂದ್ರದ ಒಳಗೆ ಹೋಗುತ್ತಾಳೋ... ಅಥವಾ ಹೊರ ಓಡಿಹೋಗುತ್ತಾಳೊ? ಅವಳ ಜೊತೆ ಕಳೆದ ಸುಂದರ ಕ್ಷಣಗಳೆಲ್ಲಾ ಚೇಳುಗಳಾಗಿ ಕುಟುಕಲಾರಂಭಿಸಿದವು. ಪಾರಿಯನ್ನು ಮನೆಯಲ್ಲಿ ಇಟ್ಟುಕೊಳ್ಳುವ ಮನಸ್ಸು ನಾನು ಮಾಡಲಿಲ್ಲವೇಕೆ? ನನ್ನ ನಿರ್ಧಾರಕ್ಕೂ, ಅಂದು ಆ ಗುಪ್ತ ಸಭೆಯ ನಿರ್ಧಾರಕ್ಕೂ ಹೆಚ್ಚೇನು ವ್ಯಾತ್ಯಾಸವಿಲ್ಲ ಎನಿಸಿ, ಮನಸಿಗೆ ಕಸಿವಿಸಿಯಾಯಿತು. ನನ್ನ ಮಹಿಳಾಪರ ಹೋರಾಟಗಳು, ಭಾಷಣಗಳು, ಹೇಳಿಕೆಗಳು ಕೇಕೆ ಹಾಕಿ ನಗಲಾರಂಭಿಸಿದವು. ಸುತ್ತಲಿನ ಜಗತ್ತಿನ ಮನೋವ್ಯಾಪಾರಗಳಲ್ಲಿ ಮಗ್ನಳಾದ ನನಗೆ, ಭರ್ಜರಿ ಬೆಳಕಿನ ಭರಾಟೆಯಲ್ಲಿ ಬೀಗುತ್ತಿದ್ದ ನನಗೆ ನನ್ನ ಅಂತರಂಗದೊಳಗೆ ಕತ್ತಲಾವರಿಸಿದ್ದು ಗೊತ್ತಾಗಲಿಲ್ಲವಲ್ಲ. ಗೊತ್ತಾದರೂ ಏನು ಮಾಡುತ್ತಿದ್ದೆ ದಿವ್ಯನಿರ್ಲಕ್ಷ್ಯದ ಹೊರತಾಗಿ? ಗೊಂದಲಗಳ ಗೂಡಾಗಿ ಮನೆಗೆ ಬಂದರೆ, ಮಗ ಕೂಗಿ ಹೇಳುತ್ತಿದ್ದ, 'ಅಮ್ಮಾ, ಯುರೋಪ್ ಟೂರ್‌ದು ಟಿಕೆಟ್ಸ್ ಬುಕ್ ಆಗಿದೆ. ಇನ್ನೇನಿದ್ರು ಶಾಪಿಂಗ್ ಮಾಡೋದಷ್ಟೇ ಉಳಿದಿರೋದು.' ●